

بِسۡمِ اللّٰہِ الرَّحۡمَنِ الرَّحِیۡم

# ತನ್‌ವೀರ್ – ಯೋಚನೆ ಮತ್ತು ಭಾವನೆಗಳ ಪರಿಶುದ್ಧಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **22–04–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಮ್ಮೆ ಹೇಳಿದರು: ಮನುಷ್ಯನಿಗೆ ಎರಡು ವಿಷಯಗಳಲ್ಲಿ ಪರಿಶುದ್ಧತೆ ಬಹಳ ಆವಶ್ಯಕವಾಗಿದೆ. ಅದರಲ್ಲಿ ಒಂದು ಯೋಚನೆ ಮತ್ತು ಚಿಂತನೆಗಳ ಪರಿಶುದ್ಧತೆಯಾಗಿದೆ. ಇನ್ನೊಂದು ಸೂಕ್ಷ್ಮ ಭಾವನೆಗಳ ಪರಿಶುದ್ಧತೆ. ಎಂದರೆ ಒಳಿತಿನ ಭಾವನೆಗಳನ್ನು ಹೊಂದುವುದಾಗಿದೆ. ಸ್ಥಿರವಾಗಿ ಒಳ್ಳೆಯ ಮತ್ತು ಪರಿಶುದ್ಧ ಭಾವನೆಗಳು ಉಂಟಾಗುವುದು ಹೃದಯ ಪರಿಪೂರ್ಣವಾಗಿ ಪರಿಶುದ್ಧವಾದಾಗ ಆಗಿದೆ. ಯೋಚನೆಗಳು ಯಾವಾಗಲೂ ಪರಿಶುದ್ಧವಾಗಿರುವುದನ್ನು ಅರಬಿ ಭಾಷೆಯಲ್ಲಿ **ತನ್‌ವೀರ್** ಎಂದು ಹೇಳುತ್ತಾರೆ. ಅದು ಮಸ್ತಿಷ್ಕದ ಪರಿಶುದ್ಧತೆಯಿಂದ ಲಭಿಸುತ್ತದೆ. ತನ್‌ವೀರ್ ಎಂದರೆ ಮನುಷ್ಯನ ಯೋಚನೆಗಳು ಯಾವಾಗಲೂ ಪರಿಶುದ್ಧವಾಗಿಯೇ ಇರುವಂತೆ ಅವನಲ್ಲಿ ಒಂದು ಪ್ರಕಾಶ ಉಂಟಾಗುವುದಾಗಿದೆ. ತನ್‌ವೀರ್ ಎಂದರೆ ಪ್ರಯತ್ನ ಮಾಡಿ ಒಳ್ಳೆಯ ಯೋಚನೆ ಮಾಡುವುದರ ಹೆಸರಲ್ಲ. ಸಹಜವಾಗಿಯೇ ಆ ಗುಣ ಹೊಂದುವುದಾಗಿದೆ. ಯಾವಾಗಲೂ ಸರಿಯಾದ ಯೋಚನೆಗಳು ಹುಟ್ಟುವ ಗುಣ ಹೊಂದಿರುವುದು ಹಾಗೂ ತಪ್ಪು ಯೋಚನೆಗಳು ಹುಟ್ಟದೇ ಇರುವ ಸ್ಥಿತಿಯೂ ಆಗಿದೆ. ಇದು ನಿರಂತರ ಪ್ರಯತ್ನ ಮತ್ತು ಅಲ್ಲಾಹನ ಅನುಗ್ರಹದಿಂದಲೇ ಲಭಿಸುತ್ತದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನಾನು ಸ್ವತಃ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಂದ ಆಲಿಸಿದ್ದೇನೆ. ಕೆಲವು ಸಾರಿ ಯಾವುದಾದರೂ **ಫಿಕ್‌ಹೀ** (ಕರ್ಮಶಾಸ್ತ್ರದ) ಪ್ರಶ್ನೆಯನ್ನು ಅವರೊಂದಿಗೆ ಕೇಳಿದಾಗ, ಇಂತಹ ಪ್ರಶ್ನೆಗಳು ಸಾಮಾನ್ಯವಾಗಿ ಈ ವಿಷಯದಲ್ಲಿ ಕಾರ್ಯನಿರತರಾದವರಿಗೆ ಹೆಚ್ಚು ನೆನಪಿರುವುದರಿಂದ, ಅವರು ಕೆಲವು ಸಾರಿ ಹೇಳುತ್ತಿದ್ದರು: ನೀವು ಮೌಲವಿ ನೂರ್‌ದ್ದೀನ್ ಸಾಹೇಬರರೊಂದಿಗೆ ಕೇಳಿರಿ ಎಂದು ಹೇಳುತ್ತಿದ್ದರು. ಅಥವಾ ಮೌಲವಿ ಅಬ್ದುಲ್ ಕರೀಮ್ ಸಾಹೇಬರರೊಂದಿಗೆ ಕೇಳಿರಿ, ಅಥವಾ ಮೌಲವಿ ಸಯ್ಯದ್ ಅಹ್‌ಸನ್ ಸಾಹೇಬರರೊಂದಿಗೆ ವಿಚಾರಿಸಿರಿ ಎಂದು ಹೇಳುತ್ತಿದ್ದರು. ಅಥವಾ ಬೇರೆ ಯಾವುದಾದರೂ ಮೌಲವಿಯ ಹೆಸರು ಹೇಳುತ್ತಿದ್ದರು. ಆದರೆ, ಕೆಲವು ಸಾರಿ ಯಾವುದಾದರೂ ಪ್ರಶ್ನೆಗೆ ಪರಿಹಾರವಾಗಿ ತಾನು ಅಲ್ಲಾಹನಿಂದ ನಿಯೋಜಿತನಾಗಿರುವ ನೆಲೆಯಲ್ಲಿ ಲೋಕಕ್ಕೆ ಮಾರ್ಗದರ್ಶನ ನೀಡುವ ಆವಶ್ಯಕತೆ ಇದೆ ಎಂದು ಮನವರಿಕೆ ಮಾಡಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸ್ವತಃ ಅಂತಹ ಪ್ರಶ್ನೆಗಳಿಗೆ ಪರಿಹಾರ ಸೂಚಿಸುತ್ತಿದ್ದರು. ಯಾವುದಾದರೂ ವಿಷಯ ಹೊಸ ಸುಧಾರಣೆಗೆ ಸಂಬಂಧಿಸದೆ ಇರುವಾಗ ಅವರು "ನೀವು ಆ ಮೌಲವಿ ಸಾಹೇಬರರೊಂದಿಗೆ ವಿಚಾರಿಸಿರಿ" ಎಂದು ಹೇಳುತ್ತಿದ್ದರು. ಅವರು ಉದ್ದೇಶಿಸಿದ ಮೌಲವಿ ಸಾಹೇಬರು ಅಲ್ಲೇ ಕುಳಿತಿದ್ದರೆ ಅವರೊಂದಿಗೆ "ಮೌಲವಿ ಸಾಹೇಬ್, ಈ ಪ್ರಶ್ನೆಗೆ ಪರಿಹಾರ ಹೇಗೆ?" ಎಂದು ಕೇಳುತ್ತಿದ್ದರು. ಕೆಲವು ಸಾರಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ "ನೀವು ಆ ಮೌಲವಿ ಸಾಹೇಬರರೊಂದಿಗೆ ವಿಚಾರಿಸಿರಿ" ಎಂದು ಹೇಳುತ್ತಿದ್ದಾಗ ಅದರೊಂದಿಗೆ ಹೀಗೆ ಹೇಳುತ್ತಿದ್ದರು– ನನ್ನ ಮನಸ್ಸು ಹೇಳುತ್ತದೆ, ಈ ವಿಷಯ ಹೀಗೆ ಆಗಬೇಕು ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳುತ್ತಿದ್ದರು: ನಮಗೆ ಈ ಪ್ರಶ್ನೆಯ ಬಗ್ಗೆ ತಿಳಿದಿಲ್ಲವಾದರೂ ನಮ್ಮ ಪ್ರಕೃತಿ ಅದರ ಬಗ್ಗೆ ಪ್ರಕಟಿಸುವ ಧ್ವನಿ ಹೇಗಿರುತ್ತದೆ ಎಂದರೆ ಆ ವಿಷಯದ ಪರಿಹಾರವನ್ನು ನಂತರ ಹದೀಸುಗಳಲ್ಲಿ ಹುಡುಕುವಾಗ ಅದು ಅದೇ ರೀತಿ ಕಂಡು ಬರುತ್ತಿತ್ತು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ತನ್‌ವೀರ್ ಎಂದರೆ ಮನುಷ್ಯನ ಮಸ್ತಿಷ್ಕದಲ್ಲಿ ಹುಟ್ಟುವ ಯಾವುದೇ ಯೋಚನೆಗಳು ಸರಿಯಾದುದಾಗಿರುತ್ತವೆ ಎಂಬ ಸ್ಥಿತಿಯಾಗಿದೆ. ಮನುಷ್ಯನ ಆರೋಗ್ಯ ಒಂದು ರೀತಿಯಲ್ಲಿ ಹೀಗಿರುತ್ತದೆ. ಅವನು ಹೇಳುತ್ತಾನೆ: "ನಾನು ಈಗ ಆರೋಗ್ಯದಿಂದಿದ್ದೇನೆ." ಇನ್ನೊಂದು ರೀತಿಯ ಆರೋಗ್ಯ ಹೇಗಿರುತ್ತದೆ ಎಂದರೆ ಅವನು ಮುಂದೆ ಸಹ ಆರೋಗ್ಯ ಹೊಂದಿರುತ್ತಾನೆ. ತನ್‌ವೀರ್ ಎಂದರೆ ಯೋಚನೆಗಳನ್ನು ಸರಿಪಡಿಸುವುದಾಗಿದೆ. ಅದರ ಪರಿಣಾಮವಾಗಿ ಮುಂದೆ ಹುಟ್ಟುವ ಯೋಚನೆಗಳು ಸಹ ಸರಿಯಾಗಿಯೇ ಇರುತ್ತವೆ. ಆಧ್ಯಾತ್ಮಿಕ ಅಭಿವೃದ್ಧಿಗೆ ಯೋಚನೆಗಳನ್ನು ಸರಿಪಡಿಸುವುದು ಆವಶ್ಯಕವಾಗಿದೆ. ಇದೇ ರೀತಿ ಆಧ್ಯಾತ್ಮಿಕ ಅಭಿವೃದ್ಧಿಗೆ ತಖ್ವ ಮತ್ತು ತ್ವಹಾರತ್ (ಭಯಭಕ್ತಿ ಮತ್ತು ಸ್ವಚ್ಛತೆ) ಆವಶ್ಯಕವಾಗಿದೆ. ತನ್‌ವೀರ್ ಮಸ್ತಿಷ್ಕದ ಪರಿಶುದ್ಧಿಗೆ ಸಂಬಂಧಿಸಿರುತ್ತದೆ. ತಖ್ವ (ಭಯಭಕ್ತಿ) ಹೃದಯಕ್ಕೆ ಸಂಬಂಧಿಸಿರುತ್ತದೆ. ಜನರು ಒಳಿತು ಮತ್ತು ತಖ್ವ ಒಂದೇ ಎಂದು ಭಾವಿಸುತ್ತಾರೆ. ಆದರೆ ಒಳಿತು ಎಂದರೆ ನಾವು ಮಾಡಿದ ಒಳ್ಳೆಯ ಕೆಲಸವಾಗಿದೆ. ಅಥವಾ ನಾವು ಮಾಡಲು ನಿರ್ಧರಿಸಿದ ಒಳ್ಳೆಯ ಕೆಲಸಗಳಾಗಿವೆ. ಆದರೆ ತಖ್ವ ಎಂದರೆ ಮನುಷ್ಯನಲ್ಲಿ ಹುಟ್ಟುವ ಭಾವನೆಗಳು ಒಳ್ಳೆಯದಾಗಿರಬೇಕು. ಇದರ ಮೊದಲು ಹೇಳಿದ ಹಾಗೆ ಯೋಚನೆ, ಚಿಂತನೆಗಳು ಮಸ್ತಿಷ್ಕದೊಂದಿಗೆ ಸಂಬಂಧಿಸಿವೆ. ಅವು ಸರಿಯಾಗಿರುವುದು ತನ್‌ವೀರ್ ಆಗಿದೆ. ಭಾವನೆಗಳು ಯಾವಾಗಲೂ ಒಳ್ಳೆಯದಾಗಿರುವುದು ತಖ್ವ ಆಗಿದೆ. ಅದು ಹೃದಯಕ್ಕೆ ಸಂಬಂಧಿಸಿದೆ. ಮನುಷ್ಯನ ಯೋಚನೆಗಳಲ್ಲಿ ತನ್‌ವೀರ್ (ಪ್ರಕಾಶ) ಉಂಟಾದರೆ ಮತ್ತು ಹೃದಯದಲ್ಲಿ ತಖ್ವ (ಭಯಭಕ್ತಿ) ಉಂಟಾದರೆ ಅವನು ಕೆಡುಕಿನ ಆಕ್ರಮಣದಿಂದ ಸುರಕ್ಷಿತನಾಗುತ್ತಾನೆ. ಕೆಡುಕಿನ ಆಕ್ರಮಣದಿಂದ ಸಂರಕ್ಷಿಸಲ್ಪಟ್ಟ ಮನುಷ್ಯನು ಅಲ್ಲಾಹನ ಅನುಗ್ರಹದ ಕೆಳಗೆ ಇರುತ್ತಾನೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಪ್ರಶ್ನೆ ಕೇಳುವ ಕೆಲವರನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಮಾಅತಿನ ಇತರ ವಿದ್ವಾಂಸರ ಕಡೆಗೆ ಕಳುಹಿಸುತ್ತಿದ್ದರು. ಆದರೆ ಅನೇಕ ಪ್ರಶ್ನೆಗಳು ಬಾಹ್ಯವಾಗಿ ಚಿಕ್ಕದಾಗಿ ಕಾಣಿಸುತ್ತಿದ್ದರೂ ಅವುಗಳಿಗೆ ಸಂಬಂಧಿಸಿ ಅವರು ಸ್ವತಃ ಜಮಾಅತಿನ ವಿದ್ವಾಂಸರಿಗೂ ಸರಿಯಾದ ಮಾರ್ಗದರ್ಶನ ನೀಡುತ್ತಿದ್ದರು.

ಇದಕ್ಕೆ ಸಂಬಂಧಿಸಿ ಖಾಝೀ ಅಮೀರ್ ಹುಸೈನ್ ಸಾಹೇಬರು ಹೇಳುತ್ತಾರೆ: ನನ್ನ ಅಭಿಪ್ರಾಯ ಪ್ರಕಾರ ಯಾತ್ರೆಯಲ್ಲಿ ನಮಾಝ್‌ಗಳನ್ನು ಖಸ್ರ್ ಮಾಡುವುದು ಸಾಮಾನ್ಯ ಪರಿಸ್ಥಿತಿಗಳಲ್ಲಿ ಅನುಮತಿಸಲ್ಪಟ್ಟಿಲ್ಲ. ಯುದ್ಧದ ಮತ್ತು ಗಲಬೆ ಗೊಂದಲದ ಭಯದ ಸ್ಥಿತಿಯಲ್ಲಿ ಮಾತ್ರ ಅದಕ್ಕೆ ಅನುಮತಿ ಇದೆ ಎಂದು ನಾನು ಭಾವಿಸಿದ್ದೆ. ಈ ವಿಷಯದಲ್ಲಿ ನಾನು ಹಝ್‌ರತ್ ಖಲೀಫತುಲ್ ಮಸೀಹ್ ಅವ್ವಲ್‌ರೊಂದಿಗೆ ಬಹಳ ವಾಗ್ವಾದ ಸಹ ಮಾಡುತ್ತಿದ್ದೆ. ಗುರುದಾಸಪುರದಲ್ಲಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೊಕದ್ದಮೆ ನಡೆಯುತ್ತಾ ಇದ್ದಾಗ ನಾನು ಒಮ್ಮೆ ಅಲ್ಲಿಗೆ ಹೋಗಿದ್ದೆ. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೊತೆಗೆ ಹಝ್‌ರತ್ ಖಲೀಫತುಲ್ ಮಸೀಹ್ ಅವ್ವಲ್ ಮತ್ತು ಮೌಲವಿ ಅಬ್ದುಲ್ ಕರೀಮ್ ಸಾಹೇಬರೂ ಇದ್ದರು. ಝುಹ್‌ರ್ ನಮಾಝ್ ಸಮಯದಲ್ಲಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನನ್ನೊಂದಿಗೆ ಹೇಳಿದರು: ನೀವು ನಮಾಝ್‌ಗೆ ನೇತೃತ್ವ ವಹಿಸಿರಿ ಎಂದು. ಆಗ ನಾನು ಹೃದಯದಲ್ಲಿ ದೃಢ ನಿರ್ಧಾರ ಮಾಡಿದೆ. ಈಗ ನನಗೆ ಒಳ್ಳೆಯ ಸಂದರ್ಭ ಲಭಿಸಿದೆ. ನಾನು ನಮಾಝನ್ನು ಖಸ್ರ್ ಮಾಡದೆ ಅನುಷ್ಠಿಸುವೆ. ಈ ವಿಷಯಕ್ಕೆ ಸಂಬಂಧಿಸಿ ತೀರ್ಪು ಸಹ ಆಗುವುದು. ನಾನು ನಮಾಝ್ ಮಾಡಲು ಕೈ ಎತ್ತಿ ಅಲ್ಲಾಹು ಅಕ್‌ಬರ್ ಎಂದು ಹೇಳುವ ಮೊದಲೇ ನನ್ನ ಹಿಂದೆ ಬಲಭಾಗದಲ್ಲಿ ನಿಂತಿದ್ದ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕೂಡಲೆ ನನ್ನ ಬಳಿಗೆ ಬಂದು ನನ್ನ ಕಿವಿಗೆ ಹತ್ತಿರ ಹೇಳಿದರು: ಖಾಝೀ ಸಾಹೇಬ್, ನಮಾಝ್ ಎರಡು ರಕ್‌ಅತ್ ಅನುಷ್ಠಿಸುವಿರಲ್ಲವೇ? ಆಗ ನಾನು ಹೇಳಿದೆ– ಹುಝೂರ್ ನಾನು ಎರಡು ರಕ್‌ಅತ್ ಮಾತ್ರ ಅನುಷ್ಠಿಸುವೆನು. ಖಾಝೀ ಸಾಹೇಬರು ಹೇಳುತ್ತಾರೆ: ಆ ಸಮಯದಲ್ಲಿ ನಮ್ಮ ಪ್ರಶ್ನೆಗೆ ಪರಿಹಾರ ಲಭಿಸಿತು. ನಾನು ನನ್ನ ಅಭಿಪ್ರಾಯವನ್ನು ತ್ಯಜಿಸಿದೆ.

ನಾನು ಒಂದು ವಿಷಯವನ್ನು ಸ್ಪಷ್ಟಪಡಿಸಲು ಬಯಸುತ್ತೇನೆ. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವಿಧ ಫಿಕ್‌ಹೀ ಪ್ರಶ್ನೆಗಳಿಗೆ ವಿವಿಧ ಸಂದರ್ಭಗಳಲ್ಲಿ ಸ್ವತಃ ಉತ್ತರ ನೀಡಿದ್ದಾರೆ. ಪ್ರತಿಯೊಂದು ಪ್ರಶ್ನೆಯನ್ನೂ ಜಮಾಅತಿನ ವಿದ್ವಾಂಸರ ಅವಗಾಹನೆಗೆ ಬಿಡಲು ಹೇಳುತ್ತಿರಲಿಲ್ಲ. ಅವರು ವಿವಿಧ ಸಂದರ್ಭಗಳಲ್ಲಿ ವಿವಿಧ ಸಭೆಗಳಲ್ಲಿ ಫಿಕ್‌ಹ್‌ಗೆ ಸಂಬಂಧಿಸಿ ನೀಡಿದ ವಿವರಣೆಗಳನ್ನು ಈಗ ಪಾಕಿಸ್ತಾನದ ನಝಾರತೆ ಇಶಾಅತ್, ಪುಸ್ತಕ ರೂಪದಲ್ಲಿ **ಫಿಕ್‌ಹುಲ್ ಮಸೀಹ್** ಎಂಬ ಹೆಸರಿನಲ್ಲಿ ಪ್ರಕಟಿಸಿದೆ. ಈ ವಿಷಯಗಳ ಬಗ್ಗೆ ಮಾಹಿತಿ ಗಳಿಸಲು ಜಮಾಅತಿನ ಜನರು ಈ ಪುಸ್ತಕವನ್ನು ಪಡೆದುಕೊಳ್ಳಬೇಕು. ನಾನು ಸಹ ಸಂದರ್ಭ ದೊರೆತಾಗ ಈ ವಿಷಯಗಳನ್ನು ವಿವರಿಸುವೆನು.

ಜುಮುಅ ನಮಾಝ್ ಜೊತೆಗೆ ಅಸರ್ ನಮಾಝನ್ನು ಜಂಅ್ ಮಾಡಿದರೆ ಜುಮುಅ ನಮಾಝ್‌ಗೆ ಮೊದಲು ಸುನ್ನತ್ ನಮಾಝ್‌ಗಳನ್ನು ಸಹ ಅನುಷ್ಠಿಸಬೇಕು. ಇದರ ಬಗ್ಗೆ ಸ್ಪಷ್ಟನೆ ನೀಡುತ್ತಾ ಹಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಒಬ್ಬ ಸ್ನೇಹಿತರು ಹೀಗೆ ಹೇಳಿದರು: ಒಂದು ಪ್ರಯಾಣದ ಸಂದರ್ಭದಲ್ಲಿ ಅವರು ನನ್ನೊಂದಿಗೆ ಇದ್ದರು. ನಾನು ಜುಮುಅ ಮತ್ತು ಅಸರ್ ನಮಾಝ್ ಜಂಅ್ ಮಾಡಿದೆ. ಜುಮುಅ ನಮಾಝಿಗೆ ಮೊದಲು ಸುನ್ನತ್ ನಮಾಝ್ ಸಹ ಅನುಷ್ಠಿಸಿದೆ. ಇವು ಸರಿಯಾಗಿವೆ. ನಮಾಝ್‌ಗಳನ್ನು ಜಮಾಯಿಸುವಾಗ ಸುನ್ನತ್ ನಮಾಝ್ ಮಾಡಬೇಕಾಗಿಲ್ಲ. ಆದರೆ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜುಮುಅ ನಮಾಝ್‌ಗೆ ಮೊದಲು ಸುನ್ನತ್ ನಮಾಝ್ ಮಾಡುತ್ತಿದ್ದರು. ನಾನು ಆ ಸುನ್ನತ್ ನಮಾಝ್‌ಗಳನ್ನು ಪ್ರಯಾಣ ಕಾಲದಲ್ಲಿಯೂ ಅನುಷ್ಠಿಸುತ್ತೇನೆ. ಏಕೆಂದರೆ ಜುಮುಅ ನಮಾಝ್‌ಗೆ ಮೊದಲಿರುವ ನಫ್ಲ್ ನಮಾಝ್ ಸಾಮಾನ್ಯವಾಗಿ ಝುಹರ್ ನಮಾಝ್‌ಗೆ ಮೊದಲಿರುವ ಸುನ್ನತ್ ನಮಾಝ್‌ಗಳಿಗಿಂತ ವಿಭಿನ್ನವಾಗಿದೆ. ಅವುಗಳನ್ನು ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜುಮುಅ ನಮಾಝನ್ನು ಗೌರವಿಸಲು ಸ್ಥಾಪಿಸಿದ್ದಾರೆ.

ಹಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಪ್ರಯಾಣ ಕಾಲದಲ್ಲಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜುಮುಅ ನಮಾಝ್ ಅನುಷ್ಠಿಸುವುದನ್ನು ನಾನು ಕಂಡಿರುವೆನು. ಅದೇ ರೀತಿ, ಅನುಷ್ಠಿಸದೆ ಬಿಟ್ಟದ್ದನ್ನು ಸಹ ಕಂಡಿರುವೆನು. ಆದರೆ ನಾನು ಪ್ರಯಾಣ ಕಾಲದಲ್ಲಿಯೂ ಜುಮುಅ ನಮಾಝ್ ಅನುಷ್ಠಿಸುವಾಗ ಅದರ ಮೊದಲು ಸುನ್ನತ್ ನಮಾಝ್ ಸಹ ಅನುಷ್ಠಿಸುತ್ತೇನೆ. ನನ್ನ ಅಭಿಪ್ರಾಯವೇನೆಂದರೆ ಜುಮುಅಕ್ಕೆ ಮೊದಲು ಸುನ್ನತ್ ನಮಾಝ್ ಮಾಡಬೇಕು. ಏಕೆಂದರೆ ಅವು ಸಾಮಾನ್ಯ ಸುನ್ನತ್ ನಮಾಝ್‌ಗಳಿಗಿಂತ ಬೇರೆಯಾಗಿವೆ. ಅವುಗಳನ್ನು ಜುಮುಅಕ್ಕೆ ಗೌರವ ನೀಡಲು ಅನುಷ್ಠಿಸಲಾಗುತ್ತಿದೆ.

ಮನುಷ್ಯರ ಜೀವಿತದಲ್ಲಿ ಸಂತೋಷಪಡುವ ಸಂದರ್ಭಗಳು ಬರುತ್ತವೆ. ವೈಯಕ್ತಿಕವಾಗಿ ಸಂತೋಷಪಡುವ ಮತ್ತು ಜಮಾಅತ್ ನೆಲೆಯಲ್ಲಿ ಸಂತೋಷಪಡುವ ಸಂದರ್ಭಗಳು ಬರುತ್ತವೆ. ಅದೇ ರೀತಿ ದೇಶಕ್ಕೆ ಸಂಬಂಧಿಸಿ ಸಂತೋಷಪಡುವ ಸಂದರ್ಭಗಳೂ ಬರುತ್ತವೆ. ಆದರೆ, ಅವುಗಳ ಪ್ರಕಟಣೆಯನ್ನು ಕೆಲವು ಜನರು ಮಿತಿಮೀರಿ ಮಾಡುತ್ತಾರೆ. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಇಸ್ಲಾಮೀ ಉಪದೇಶಗಳ ಪ್ರಕಾರ ಮಧ್ಯಮಾರ್ಗವನ್ನು ಅನುಸರಿಸಿ ಜನರನ್ನು ಚಲಾಯಿಸಲು ಆಗಮಿಸಿದ್ದಾರೆ. ಅವರು ಪ್ರತಿಯೊಂದು ಅತ್ಯಂತ ಚಿಕ್ಕ ವಿಷಯದ ಬಗ್ಗೆ ಸಹ ಮಾರ್ಗದರ್ಶನ ನೀಡಿದ್ದಾರೆ. ಧಾರ್ಮಿಕ ವಿಷಯಗಳ ಬಗ್ಗೆ ಮತ್ತು ಲೌಕಿಕ ವಿಷಯಗಳ ಬಗ್ಗೆ ಮಾರ್ಗದರ್ಶನ ನೀಡಿದ್ದಾರೆ. ನಾನು ಈಗ ನಮಾಝ್ ಬಗ್ಗೆ ಪ್ರಸ್ತಾಪಿಸಿದೆ. ಒಂದು ಲೌಕಿಕ ಸಂತೋಷದ ಸಂದರ್ಭದಲ್ಲಿ ಅದನ್ನು ಹೇಗೆ ಪ್ರಕಟಿಸಬೇಕು ಎನ್ನುವುದರ ಬಗ್ಗೆ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಯಾವ ಮಾರ್ಗದರ್ಶನ ನೀಡಿದರು ಎಂದು ಹಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹ್ ಅನ್‌ಹು ವಿವರಿಸಿರುವುದನ್ನು ನಿಮ್ಮ ಮುಂದೆ ಇಡುತ್ತೇನೆ. ಹಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ದೀಪಾಲಂಕಾರ ಮಾಡಿದುದು ಸಾಬೀತಾಗಿದೆ. ಮಹಾರಾಣಿ ವಿಕ್ಟೋರಿಯಾರವರ ಜ್ಯೂಬಿಲಿ ಸಂದರ್ಭದಲ್ಲಿ ದೀಪಾಲಂಕಾರ ಮಾಡಲಾಗಿತ್ತು. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಂತೋಷ ಪ್ರಕಟಿಸಿದ ರೀತಿ ಜಾಣ್ಮೆಯಿಂದ ಕೂಡಿತ್ತು. ಸತ್ಯವಿಶ್ವಾಸಿಯ ಪ್ರತಿಯೊಂದು ಕೆಲಸ ಜಾಣ್ಮೆಯಿಂದ ಕೂಡಿರುತ್ತದೆ. ವಿಸ್ತಾರವಾಗಿ ದೀಪಲಂಕಾರ ಮಾಡುವುದರಿಂದ, ಪ್ರತಿಯೊಂದು ಮನೆಯಲ್ಲೂ ದೀಪಾಲಂಕಾರ ಮಾಡುವುದು

ಆವಶ್ಯಕವೆಂದು ಹೇಳುವುದರಿಂದ ಎಷ್ಟು ಹೆಚ್ಚು ಹಣ ಖರ್ಚು ಆಗುತ್ತದೆ ಎಂದರೆ ಅದಕ್ಕೆ ಪ್ರತಿಯಾಗಿ ಅದರಿಂದ ವಾಸ್ತವಿಕವಾಗಿ ಲಾಭವೇನೂ ಕಂಡು ಬರುವುದಿಲ್ಲ. ಆದರೆ ದೇಶಕ್ಕೆ ಸಂಬಂಧಿಸಿ ಮತ್ತು ರಾಜಕಾರಣಕ್ಕೆ ಸಂಬಂಧಿಸಿ ಅದರ ಆವಶ್ಯಕತೆ ಇರುವಾಗ ಮತ್ತು ಹೆಚ್ಚು ಸಂತೋಷ ಪ್ರಕಟಣೆಯ ಆವಶ್ಯಕತೆ ಇರುವಾಗ ಹೀಗೆ ಮಾಡಿದರೆ ತಪ್ಪಿಲ್ಲ. ಉದಾಹರಣೆಗೆ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಮಸ್‌ಜಿದ್‌ನಲ್ಲಿ ಹೆಚ್ಚು ಬೆಳಕನ್ನು ನೀಡುವ ವ್ಯವಸ್ಥೆ ಮಾಡಿದ್ದರು. ಮಸ್‌ಜಿದ್ ಎಂತಹ ಸ್ಥಳವೆಂದರೆ ಅಲ್ಲಿ ಹೆಚ್ಚು ಬೆಳಕಿರುವುದು ಆವಶ್ಯಕವಾಗಿದೆ. ಏಕೆಂದರೆ ಅಲ್ಲಿ ಜನರು ಪವಿತ್ರ ಖುರ್‌ಆನ್ ಪಠಿಸುತ್ತಾರೆ ಮತ್ತು ಧಾರ್ಮಿಕ ಗ್ರಂಥಗಳನ್ನು ಅಧ್ಯಯನ ಮಾಡುತ್ತಾರೆ. ಆದುದರಿಂದ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಮಸ್‌ಜಿದ್‌ನಲ್ಲಿ ಹೆಚ್ಚು ಬೆಳಕಿನ ವ್ಯವಸ್ಥೆ ಮಾಡಿದುದು ಜಾಣ್ಮೆಯಿಂದ ಕೂಡಿತ್ತು. ಆದರೆ ನಾವು ತಿಳಿದಿರುವಂತೆ ಇಸ್ಲಾಮ್‌ನಲ್ಲಿ ಸಂತೋಷ ಪ್ರಕಟಣೆ ನಡೆಸುವುದು ಮಾನವರಿಗೆ ಹೆಚ್ಚು ಲಾಭದಾಯಕವಾಗುವ ರೀತಿಯಲ್ಲಾಗಿದೆ. ಉದಾಹರಣೆಗೆ ಈದುಲ್ ಅಝ್‌ಹಾದಲ್ಲಿ ಮೃಗ ಬಲಿ ನೀಡುವಾಗ ಅದರಿಂದ ಬಡವರಿಗೆ ಮಾಂಸ ದೊರಕುತ್ತದೆ. ಈದುಲ್ ಫಿತ್ರ್ ಸಂದರ್ಭದಲ್ಲಿ ಫಿತ್ರಾನ ಮೂಲಕ ಬಡವರಿಗೆ ಸಹಾಯ ಮಾಡಲಾಗುತ್ತಿದೆ. ಇಸ್ಲಾಮ್ ಧರ್ಮ ಸಂತೋಷ ಪ್ರಕಟಿಸುವ ಆಜ್ಞೆ ನೀಡಿರುವಲ್ಲಿ ಅದು ಹೀಗೆ ಮಾರ್ಗದರ್ಶನ ನೀಡಿದೆ. ಸಂತೋಷ ಹೇಗೆ ಪ್ರಕಟಿಸಬೇಕೆಂದರೆ ಅದರಿಂದ ದೇಶಕ್ಕೆ ಮತ್ತು ಮಾನವರಿಗೆ ಹೆಚ್ಚು ಲಾಭ ಲಭಿಸಬೇಕು. ಆದರೆ ದೀಪಾಲಂಕಾರದಿಂದ ಇಂತಹ ಪ್ರಯೋಜನ ಸಿಗುವುದಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ದೀಪಾಲಂಕಾರ ಮಾಡಿದುದು ಒಂದು ರಾಜಕೀಯ ಉದ್ದೇಶದಿಂದಾಗಿತ್ತು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮಕ್ಕಳಾದ ನಮ್ಮನ್ನು ಸಂತೋಷಪಡಿಸಲು ಕೆಲವೊಮ್ಮೆ ಪಟಾಕಿಗಳನ್ನು ಖರೀದಿಸಿ ನೀಡುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು– ಪಟಾಕಿಗಳಲ್ಲಿ ಇರುವ ಗಂಧಕ ಉರಿಯುವಾಗ ಕ್ರಿಮಿಗಳು ನಾಶವಾಗುತ್ತವೆ. ಕೇವಲ ಮಕ್ಕಳನ್ನು ಸಂತೋಷಪಡಿಸಲು ಮಾತ್ರವಲ್ಲ ಪಟಾಕಿಗಳಲ್ಲಿ ಗಂಧಕ ಇರುವುದರಿಂದ ಅವು ಉರಿಯುವಾಗ ಪರಿಸರ ಸ್ವಚ್ಛವಾಗುತ್ತದೆ. ಆದುದರಿಂದ ನಮಗೆ ವಿವಿಧ ರೀತಿಯ ಪಟಾಕಿಗಳನ್ನು ತರಿಸಿ ನೀಡುತ್ತಿದ್ದರು. ಮಕ್ಕಳು ಸ್ವಲ್ಪ ಮಟ್ಟಿಗೆ ಸಂತೋಷ ಪ್ರಕಟಿಸಿದರೆ ಅದರಲ್ಲಿ ದೋಷವಿಲ್ಲ. ಅವರ ಭಾವನೆಗಳನ್ನು ಸಂಪೂರ್ಣವಾಗಿ ದಬಾಯಿಸಬಾರದು. ಮಕ್ಕಳಿಗೆ ಆಟವಾಡುವ ಅವರ ಪ್ರಾಯದ ಕಾಲದಲ್ಲಿ ಇಸ್ಲಾಮ್ ಆವಶ್ಯಪಡುವ ಶಿಸ್ತನ್ನು ಕಾಪಾಡುವುದರೊಂದಿಗೆ, ಅವರ ಸಹಜವಾದ ಅಭಿರುಚಿಯನ್ನು ಇಸ್ಲಾಂ ನಿರಾಕರಿಸುವುದಿಲ್ಲವೆಂದು ಅವರಿಗೆ ಮನವರಿಕೆಯಾಗಬೇಕು. ಉದಾಹರಣೆಗೆ ದೀಪಾಲಂಕಾರ, ಪಟಾಕಿ ಹಾರಿಸುವುದು ಮೊದಲಾದ ಸಂದರ್ಭಗಳಲ್ಲಿ ದೇಶದ ಸಾಮೂಹಿಕ ಸಂತೋಷದಲ್ಲಿ ಅವರು ಭಾಗವಹಿಸುವಂತೆ ಮಾಡುತ್ತದೆ ಮತ್ತು ದೇಶದೊಂದಿಗೆ ಸಂಬಂಧವನ್ನು ಬಹಿರಂಗಪಡಿಸಿದಂತೆಯೂ ಆಗುತ್ತದೆ. ಅದು ಮಕ್ಕಳಿಗೆ ಸಂತೋಷಕರವೂ ಆಗಿರುತ್ತದೆ. ಆದುದರಿಂದ ಸಂದರ್ಭಕ್ಕೆ ಅನುಸಾರವಾಗಿ, ಮಿತಿಮೀರದೆ, ಸಂತೋಷ ಪ್ರಕಟಣೆ ನಡೆಸುವುದು ತಪ್ಪಲ್ಲ. ಆದರೆ ಮಕ್ಕಳಿಗೆ ಬಾಲ್ಯಕಾಲದಲ್ಲಿಯೇ ಸ್ಪಷ್ಟವಾಗಿ ತಿಳಿಸಬೇಕು– ಇಸ್ಲಾಮ್ ಧರ್ಮದ ವಲಯದಲ್ಲಿ ನಿಂತುಕೊಂಡು ಮತ್ತು ದೇಶದ ನಿಯಮಗಳ ವಲಯದಲ್ಲಿ ನಿಂತುಕೊಂಡು ಮಾತ್ರವೇ ಈ ಎಲ್ಲವುಗಳನ್ನು ಮಾಡಬೇಕು ಮತ್ತು ಮುಂದೆ ಸಹ ಮಾಡುತ್ತಾ ಇರಬೇಕು ಎಂದು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತನ್ನ ಬಾಲ್ಯಕಾಲದ ಎರಡು ಘಟನೆಗಳನ್ನು ವಿವರಿಸುತ್ತಾ ಹೀಗೆ ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಮ್ಮೆ ಮುಲ್ತಾನಿಗೆ ಹೋದಾಗ ನಾನು ಸಹ ಜೊತೆಗಿದ್ದೆ. ಮರಳಿ ಬರುವಾಗ ಅವರು ಲಾಹೋರಿನಲ್ಲಿ ತಂಗಿದರು. ಅಲ್ಲಿ ಆಗ ಮೇಣದ ಬೊಂಬೆಗಳ ಪ್ರದರ್ಶನ ನಡೆಯುತ್ತಿತ್ತು. ಮೇಣದಿಂದ ಚಿತ್ರಗಳನ್ನೂ ಬೊಂಬೆಗಳನ್ನೂ ನಿರ್ಮಿಸಿ ವಿವಿಧ ಬಾದಶಹರ ಮತ್ತು ಅವರ ದರಬಾರಿನ ಜನರ ವಿಷಯ ವಿವರಿಸಲಾಗುತ್ತಿತ್ತು. ಶೇಖ್ ರಹ್ಮತುಲ್ಲಾ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೇಳಿದರು: ''ಇವು ಜ್ಞಾನವರ್ಧಕಗಳಾಗಿವೆ. ತಾವು ಅದನ್ನು ಕಾಣಲು ಬನ್ನಿರಿ'' ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿರಾಕರಿಸಿದರು. ಅನಂತರ ಶೇಖ್ ಸಾಹೇಬರು ನನ್ನನ್ನು ಒತ್ತಾಯಿಸಿ ಹೇಳಿದರು ನಾನು ಮೇಣದ ಬೊಂಬೆಗಳನ್ನು ನೋಡಬೇಕೆಂದು. ನಾನು ಆಗ ಚಿಕ್ಕವನಾಗಿದ್ದೆ. ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ''ನನ್ನನ್ನು ಕರೆದುಕೊಂಡು ಹೋಗಿ ಬೊಂಬೆಗಳನ್ನು ತೋರಿಸಿರಿ'' ಎಂದು ಹೇಳುತ್ತಾ ಅವರ ಬೆನ್ನ ಹಿಂದೆ ನಡೆದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನನ್ನ ಒತ್ತಾಯದ ಕಾರಣ ನನ್ನನ್ನು ಕರೆದುಕೊಂಡು ಹೋದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಿಗೆ ಹೋದುದು ಏಕೆಂದರೆ ಅನೇಕ ಜನರು ಹೇಳಿದ್ದರು ಅದೊಂದು ಜ್ಞಾನವರ್ಧಕ ಪ್ರದರ್ಶನವೆಂದು. ಅದನ್ನು ನೋಡುವುದು ತಪ್ಪಲ್ಲ ಎಂದು. ಅವರು ಒಬ್ಬ ಮಗುವಿನ ಹಟದ ಕಾರಣದಿಂದ ಅಲ್ಲಿಗೆ ಹೋದುದಾಗಿರಲಿಲ್ಲ. ಅದು ಇಸ್ಲಾಮ್ ಧರ್ಮದ ಉಪದೇಶಗಳಿಗೆ ವಿರುದ್ಧವೆಂದು ಅವರು ಗಣಿಸಿದ್ದರೆ, ಮಗು ಹಟ ಮಾಡಿದ್ದರೂ ಅಲ್ಲಿಗೆ ಹೋಗುತ್ತಿರಲಿಲ್ಲ. ಅದೊಂದು ಜ್ಞಾನವರ್ಧಕ ವಿಷಯವಾದುದರಿಂದ ತನ್ನ ಚಿಕ್ಕ ಮಗನೊಂದಿಗೆ ಅಲ್ಲಿಗೆ ಹೋಗಿ ನೋಡಿದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನನಗೆ ನೆನಪಿರುವ ಇನ್ನೊಂದು ಘಟನೆ ಹೀಗಿದೆ– ಮುಫ್ತಿ ಮುಹಮ್ಮದ್ ಸಾದಿಖ್ ಸಾಹೇಬ್ ಅಥವಾ ಅವರ ಮಗು ರೋಗಬಾಧಿತವಾಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಕಾಣಲು ನಗರದೊಳಗೆ ಹೋಗಿ ಮರಳಿ ಬರುತ್ತಿದ್ದಾಗ ಲಾಹೋರಿನ ಸುನ್‌ಹರಿ ಮಸ್‌ಜಿದ್‌ನ ಮೆಟ್ಟಲುಗಳ ಸಮೀಪ ಒಂದು ಜನರ ದೊಡ್ಡ ಗುಂಪನ್ನು ಕಂಡೆನು. ಅವರು ಬೈಯ್ಯುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕುದುರೆ ಬಂಡಿ ಆ ಗುಂಪಿನ ಸಮೀಪದಿಂದ ದಾಟಿ ಹೋಗುತ್ತಿದ್ದಾಗ ನಾನು ಆ ಗುಂಪನ್ನು ನೋಡಿ ಇದೊಂದು ಜಾತ್ರೆ ಇರಬಹುದು ಎಂದು ಭಾವಿಸಿದೆ. ನಾನು ಬಂಡಿಯಿಂದ ತಲೆ ಹೊರಗೆ ಹಾಕಿ ನೋಡಿದಾಗ ಕಂಡ ದೃಶ್ಯ ಈಗ ಸಹ ನನಗೆ ನೆನಪಿದೆ. ನಾನು ನೋಡಿದೆ– ಒಬ್ಬನ ಕೈ ಕಡಿದು ಹೋಗಿತ್ತು. ಅದರ ಮೇಲೆ ಅರಸಿನ ಪಟ್ಟಿ ಹಾಕಲಾಗಿತ್ತು. ಅವನು ಬಹಳ ಆವೇಶದಿಂದ ತನ್ನ ಕುಂಟು

ಕೈಯನ್ನು ಇನ್ನೊಂದು ಕೈ ಮೇಲೆ ಹೊಡೆಯುತ್ತಾ ಹೇಳುತ್ತಿದ್ದನು– ಮಿರ್ಝಾ ಓಡಿ ಹೋದ, ಮಿರ್ಝಾ ಓಡಿ ಹೋದ ಎಂದು.

ನೋಡಿರಿ, ಒಬ್ಬ ವ್ಯಕ್ತಿ ಗಾಯಗೊಂಡಿದ್ದಾನೆ. ಅವನ ಗಾಯ ಒಣಗಿಲ್ಲ. ಪಟ್ಟಿಗಳನ್ನು ಹಾಕಿಡಲಾಗಿದೆ. ಇಂತಹ ಮನುಷ್ಯ ಉತ್ಸಾಹ ಭರಿತನಾಗಿ ಭಾವಿಸುತ್ತಾನೆ, ನಾನು ನನ್ನ ಕುಂಟು ಕೈಯಿಂದಲೇ ಅಹ್ಮದಿಯ್ಯತ್ತನ್ನು ನಾಶ ಮಾಡುವೆನು. ಅಥವಾ ದಫನು ಮಾಡಿ ಬಿಡುವೆನು ಎಂದು. ಇದೆಷ್ಟು ಅಪಾಯಕರ ಶತ್ರುತ್ವವಾಗಿದೆ. ಇವರು ಇಂತಹ ಹಗೆತನ ಹೊಂದಿರುತ್ತಾರೆ. ಜನರು ಖಾದಿಯಾನಿಗೆ ಬರಬಾರದು ಮತ್ತು ಅಹ್ಮದಿಯ್ಯತ್ ಸ್ವೀಕರಿಸಬಾರದೆಂದು ಈ ಜನರು ಎಷ್ಟೆಲ್ಲ ತೀವ್ರ ಪ್ರಯತ್ನ ಮಾಡಿದರು. ಈಗ ಸಹ ಅನೇಕ ಅಹ್ಮದಿಯರು ಇದ್ದಾರೆ. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಖಾದಿಯಾನಿಗೆ ಬರಲು ಬಟಾಲಕ್ಕೆ ಆಗಮಿಸಿದ್ದರು. ಆದರೆ ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಅವರನ್ನು ಮರಳಿ ಹೋಗುವಂತೆ ಮಾಡಿದ್ದರು. ಮೌಲವಿ ಅಬ್ದುಲ್ ಮಾಜಿದ್ ಸಾಹೇಬ್ ಭಾಗಲ್‌ಪುರಿ ಸಹ ಇದೇ ಕಾರಣದಿಂದ ಆರಂಭಕಾಲದಲ್ಲಿ ಅಹ್ಮದಿಯ್ಯತ್ ಸ್ವೀಕರಿಸುವುದರಿಂದ ವಂಚಿತರಾದರು. ಅವರು ಬಟಾಲಕ್ಕೆ ಬಂದಾಗ ಮೌಲವಿ ಮುಹಮ್ಮದ್ ಹುಸೈನ್ ಅವರನ್ನು ಪುಸಲಾಯಿಸಿ ಮರಳಿ ಹೋಗುವಂತೆ ಮಾಡಿದ್ದರು. ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿಯ ದೈನಂದಿನ ಕೆಲಸ ಇದೇ ಆಗಿತ್ತು. ಪ್ರತಿ ದಿನ ಅವರು ಬಟಾಲ ರೈಲ್ವೇ ಸ್ಟೇಷನಿಗೆ ಹೋಗುತ್ತಿದ್ದರು. ಖಾದಿಯಾನಿಗೆ ಹೋಗಲು ರೈಲು ಬಂಡಿಯಿಂದ ಇಳಿಯುವವರೊಂದಿಗೆ ಹೇಳುತ್ತಿದ್ದರು: ನೀವು ಖಾದಿಯಾನಿಗೆ ಹೋಗಿ ಗಳಿಸಲು ಏನಿದೆ? ಅಲ್ಲಿಗೆ ಹೋದರೆ ನಿಮ್ಮ ವಿಶ್ವಾಸ (ಈಮಾನ್) ಕೆಟ್ಟು ಹೋಗುವುದು ಎಂದು ಹೇಳುತ್ತಿದ್ದರು. ಅನೇಕ ಜನರು ಅವರನ್ನು ವಿದ್ವಾಂಸರೆಂದು ಗಣಿಸಿ ಮರಳಿ ಹೋಗುತ್ತಿದ್ದರು. ಮೌಲವಿ ಮುಹಮ್ಮದ್ ಹುಸೈನ್ ಹೇಳುವುದು ಸತ್ಯವಾಗಿರಬಹುದು ಎಂದು ಅವರು ಭಾವಿಸುತ್ತಿದ್ದರು. ಇವೆಲ್ಲಾ ಮೌಲವಿಗಳು ಹೊಂದಿದ್ದ ವಿರೋಧದ ಕಾರಣದಿಂದಾಗಿತ್ತು. ಅವರು ಜನ ಸಾಮಾನ್ಯರನ್ನು ಎಷ್ಟು ಉತ್ತೇಜಿಸಿದರೆಂದರೆ ಕುಂಟು ಕೈಯವನು ಸಹ ಘೋಷಣೆ ಕೂಗುತ್ತಿದ್ದನು.

ಏನಿದ್ದರೂ ವಿರೋಧಿ ಮೌಲವಿಗಳು ಅಹ್ಮದಿಯ್ಯತನ್ನು ಅಳಿಸಿ ಬಿಡಲು ಪ್ರಯತ್ನ ಮಾಡುತ್ತಾ ಇದ್ದರು. ಅಹ್ಮದಿಯಾ ಜಮಾಅತ್ ಬೆಳವಣಿಗೆ ಗಳಿಸುತ್ತಾ ಮುಂದುವರಿಯಿತು. ಈಗ ಸಹ ಅವರು ಈ ಪ್ರಯತ್ನ ಮಾಡುತ್ತಾ ಇದ್ದಾರೆ. ಮುಂದೆ ಸಹ ಪ್ರಯತ್ನ ಮಾಡುತ್ತಾ ಹೋಗುವರು. ಆದರೆ ಅಲ್ಲಾಹನ ವಿಧಿನಿರ್ಣಯ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯ ಸಂಧನಾದ ದಾಸನ ಜಮಾಅತನ್ನು ಅಭಿವೃದ್ಧಿಗೊಳಿಸಬೇಕು ಎಂದಾಗಿದೆ. ಅದು ಅಭಿವೃದ್ಧಿಗಳಿಸುತ್ತಾ ಇದೆ. ಅದು ಅಭಿವೃದ್ಧಿಗಳಿಸುತ್ತಾ ಇರುವುದು– ಇನ್‌ಶಾಅಲ್ಲಾಹ್.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇಚ್ಛಿಸಿದಂತಹ ವಾಸ್ತವಿಕ ಬದಲಾವಣೆ ನಮ್ಮಲ್ಲಿ ಉಂಟಾಗುವಂತೆ ಅಲ್ಲಾಹನು ಮಾಡಲಿ. ನೈಜ ಮುಸ್ಲಿಮರ ಮಾದರಿಯಾಗುವ ಭಾಗ್ಯ ಅಲ್ಲಾಹನು ನಮಗೆ ದಯಪಾಲಿಸಲಿ. ನಮ್ಮ ಯೋಚನೆಗಳು ಪ್ರಕಾಶಭರಿತವಾಗುವಂತೆ ಅಲ್ಲಾಹನು ಮಾಡಲಿ. ನಮ್ಮ ಹೃದಯಗಳನ್ನು ತಖ್ವದಿಂದ ತುಂಬಿಸಲಿ – ಆಮೀನ್.

————————*****————————

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 22-04-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon